

ರಾವ್‌ಬೈಲ್ ಅವರ ಅಪ್ರತಿಮ ಕಲಾಕೃತಿ 'ಮ್ಯಾಡಿಂಗ್ ಮಷೀನ್'

ಜನದಟ್ಟಣೆಯನ್ನು ರೇಖಿಸುವಾಗಿನ ರಾವ್‌ಬೈಲರ ತಾಳ್ಮೆ ಅಸದೃಶವಾದುದು. ಅವರ ಗುಂಪಿನಲ್ಲಿ ಪ್ರತಿಯೊಬ್ಬ ವ್ಯಕ್ತಿ ಅನನ್ಯ. ಪ್ರತಿಯೊಬ್ಬನ ಭಾವ ಭಂಗಿ ವಿಭಿನ್ನ. ಮಳೆ ಗಾಳಿಗಳಿಗೆ ಛತ್ರಿ ಹಿಡಿದು ಓಡುವ ಜನ... ಭಾಷಣಕ್ಕಾಗಿ ಕಲೆತ ಜನ... ಹೀಗೆ ಹಲವು.

ತೈಲಚಿತ್ರದಲ್ಲಿಯೂ ಇದೇ ಬಗೆಯ ಹೊಸತನ ಮತ್ತು ಮಧ್ಯಮ ವರ್ಗದ ತುಡಿತಗಳಿದ್ದವು. ಉದಾಹರಣೆಗೆ ಅವರ 'Bachelor's room' ಎಂಬ ತೈಲಚಿತ್ರದಲ್ಲಿ ಅಸ್ತವ್ಯಸ್ತ ಕೋಣೆಯೊಂದರಲ್ಲಿ ಮಂಚದ ಮೇಲೆ ಗೋಡೆಗೆ ಕಾಲುಕೊಟ್ಟು ಮಲಗಿದ ಲುಂಗಿ ಬನಿಯನ್ ಯುವಕ, ಅಲ್ಲೇ ಅಂಕುಡೊಂಕಾಗಿ ಬಿದ್ದುಕೊಂಡಿದ್ದ ಇನ್ನಿಬ್ಬರು, ಮತ್ತು ಹಾಸಿಗೆಯ ಮೂಲೆಯಲ್ಲೊಂದು ತಿಂದೆಸೆದ ಬಾಳೆಹಣ್ಣಿನ ಸಿಪ್ಪೆ. ಈ ಖಾಲಿ ಸಿಪ್ಪೆ ಇಡಿಯ ಚಿತ್ರವನ್ನು ಬ್ಯಾಲೆನ್ಸ್ ಮಾಡುವ ಜೊತೆಗೆ ಅದಕ್ಕೆ ಹೊಸ ಆಳವೊಂದನ್ನು ಕೊಡುವಂತಿದೆ.

ರಾವ್‌ಬೈಲ್‌ರ ಪ್ರತಿಭೆಯನ್ನು ನೋಡಿ ಖ್ಯಾತ ಕಲಾವಿದ ಮಾರಿಯೋ ಮಿರಾಂಡಾ ಅಂದಿದ್ದರಂತೆ : 'Get lost man... Go to some foreign country... ಇಲ್ಲಿ ನಿನ್ನ ಕಲೆಗೆ ಬೆಲೆ ಕಟ್ಟುವವರಿಲ್ಲ...' ರಾವ್‌ಬೈಲ್ ವಿದೇಶಕ್ಕೆ ಹೋಗಲಿಲ್ಲ. ಆದರೆ ಅವರ ಕಲಾಕೃತಿಗಳು ಹೋದವು.

ಲಂಡನ್ನಿನ 'Modern Publicity' ಪತ್ರಿಕೆಯ ಮುಖಪುಟವನ್ನು ಇವರ ಚಿತ್ರಗಳು ಎರಡು ಬಾರಿ ಅಲಂಕರಿಸಿದವು. ಜಿನೇವಾದ 'ಗ್ಯಾಲರಿ ಡೆನ್ ಬರ್ಗ್'ನಲ್ಲಿ 'Club Caricatures' ಮತ್ತು 'Stamps' ಪ್ರದರ್ಶಿತವಾದವು. 'Punch' ಮತ್ತು 'New Yorker' ಪತ್ರಿಕೆಗಳಲ್ಲೂ ಇವರ ಚಿತ್ರಗಳು ಮೆಚ್ಚುಗೆ ಪಡೆದವು.

ಮಹಾನಗರಗಳಲ್ಲಿ ಶ್ರೀಮಂತ ವರ್ಗದ, 'ಪೇಜ್ ಥ್ರೀ' ಜನರ, ಪಾರ್ಟಿಯಿಂದ ಪಾರ್ಟಿಗೆ ಹಾರುವ ಗಾಸಿಪ್ ಗಂಧರ್ವರ ಜಗತ್ತೊಂದಿದೆ. ರಾವ್‌ಬೈಲರಿಗೆ ಈ ಲೋಕದ ಪರಿಚಯವೂ ಆಗಿತ್ತು. ಈ ಜನಗಳ ಹಾಸ್ಯಾಸ್ಪದ ಸ್ವಪ್ರತಿಷ್ಠೆ, ಕೃತಕತೆ, ಫ್ಯಾಶನ್ನಿಗಾಗಿ ಕಲಾರಾಧನೆ, ಸುಳ್ಳು ಬೌದ್ಧಿಕತೆಗಳು ಸೂಕ್ಷ್ಮ ಗ್ರಾಹಿ ಕಲಾವಿದನನ್ನು ಕೆಣಕುವುದು ಸಹಜ. 'ಕ್ಲಬ್ ಕ್ಯಾರಿಕೇಚರ್' ಸರಣಿ ಈ ಲೋಕದ ವಿರುದ್ಧ ಬಂಡಾಯದಂತಿತ್ತು.